B.B.M.P

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 34 ಗಂಗೇನಹಳ್ಳಿ ಬೆಂಗಳೂರು.

ಸಂಖ್ಯೆ: ಸ.ಅ/ವಾ-34/ಪಿ.ಆರ್/22/2021-22

ದಿನಾಂಕ:15.12.2021

**ವಾರ್ಡ್ ಸಮಿತಿ ಸಭೆಯ ನಡುವಳಿಕೆಗಳು**

ವಿಷಯ: ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ. ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/25/2020-21 ದಿನಾಂಕ: 21-9-2020ರವರ ಆದೇಶದಂತೆ ದಿನಾಂಕ: 10-12-2021 ರಂದು ವಾರ್ಡ್ ನಂ.34 ಗಂಗೇನಹಳ್ಳಿ, ಗಂಗಾನಗರ ವಾರ್ಡ್ ಕಛೇರಿಯಲ್ಲಿ ನಡೆದ ಸಮಿತಿ ಸಭೆಯ ನಡವಳಿಗಳು.

**ಸಭೆಗೆ ಹಾಜರಾಗಿದ್ದವರ ವಿವರಗಳು::**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ತಿಮ್ಮರಸ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ.ರಾಮರಾವ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ನಂ.34 |
| 3. | ಶ್ರೀ.ಕೆ. ಸತ್ಯನಾರಾಯಣ | ಟ್ರಾಫಿಕ್ ಪೋಲೀಸ್ |
| 4. | ಶ್ರೀ.ಸೋಮೇಶ್ | ಎಸ್ ಡಬ್ಲ್ಯ ಎಂ |
| 5. | ಶ್ರೀನಿವಾಸ | ಸಾರ್ವಜನಿಕರು |
| 7. | ಶಿವಕುಮಾರ್ | ಸಾರ್ವಜನಿಕರು |
| 8. | ಕೃಷ್ಣ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ರಾಮರಾವ್ ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳ ಶ್ರೀ ತಿಮ್ಮರಸ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1) ೨ನೇ ಕ್ರಾಸ್, ಸಿ ಪಿ ವಿ ಬ್ಲಾಕ್ ನಲ್ಲಿ ಏರ್ಟೆಲ್ ಕೇಬಲ್ ನವರ್ ಸರ್ಕಲ್ ನಲ್ಲಿ ಅಗೆದಿರುವ ಗುಂಡಿಯು ಮಳೆಗೆ ತೀರ ಕುಸಿದಿದೆ ಅದನ್ನು ಸರಿಪಡಿಸುವ ಬಗ್ಗೆ ಚರ್ಚೆ ಮಾಡಲಾಯಿತು.
2) ಅಂಬೇಡ್ಕರ್ ಸ್ಲಂ ಏರೀಯಾದ ಅಂಗನವಾಡಿ ಕಟ್ಟಡದ ಹಿಂಭಾಗ ಬಿದ್ದಿರುವ ವೇಸ್ಟ್ ಮಣ್ಣಿನ ಗುಡ್ಡೆಯನ್ನು ತೆರವುಗೊಳಿಸುವ ಕುರಿತು ಚರ್ಚೆ ಮಾಡಲಾಯಿತು.
3) ಗಂಗಾನಗರ ಬಡಾವಣೆಯ ೫ನೇ ಮುಖ್ಯ ರಸ್ತೆ ಯಲ್ಲಿ ಬಿ ಡಬ್ಲ್ಯ್ ಎಸ್ ಎಸ್ ಬಿ ರವರು ಹಗೆದು ಹಾಗೆ ಬಿಟ್ಟು ಹೋಗಿರುವ ಮಣ್ಣು ಗುಡ್ಡೆಯನ್ನು ತೆರವುಗೊಳಿಸುವ ಕುರಿತು ಚರ್ಚೆ ಮಾಡಲಾಯಿತು.
4) ವಾರ್ಡ್ ನಂ.~~20~~ 34 ರಲ್ಲಿ ಸಾನಿಟೈಸರ್ ಹಾಕಬೇಕೆಂದು ಚರ್ಚಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕುಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು 15-12-2024
ಸಹಾಯಕ ಅಭಿಯಂತರರು
ವಾರ್ಡ್ ನಂ.34, ಗಂಗೇನಹಳ್ಳಿ

ಅಧ್ಯಕ್ಷರು 15/12
ನೋಡಲ್ ಅಧಿಕಾರಿಗಳು
ವಾರ್ಡ್ ನಂ.34, ಗಂಗೇನಹಳ್ಳಿ

ಪ್ರತಿಯನ್ನು:-

1) ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3) ಮಾನ್ಯ ಜಂಟೀ ಆಯಿಕ್ತರು ( ಆರೋಗ್ಯ/ಎಸ್ ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4) ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ಅವಗಾಹನೆಗೆ ಸಲ್ಲಿಸಿದೆ.
5) ವಾರ್ಡ್ ಸಮಿತಿಯ ಅಧ್ಯಕ್ಷ ಮಾಹಿತಿಗಾಗಿ ಕಳುಹಿಸಿದೆ.
6) ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯ ಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಅವಗಾಹನೆಗೆ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
9) ಸಹಾಯಕ ಅಭಿಯಂತರರು (ವಿದ್ಯುತ್/ ಪುಲಿಕೇಶಿನಗರ), ಬಿಬಿಎಂಪಿರವರ ಅವಗಾಹನೆಗೆ ಕಳುಹಿಸಿದೆ.
10) ಕಛೇರಿ ಕಡತಕ್ಕೆ.